International Journal of Kannada Research 2020; 6(3): 141-143




International Journal of Kannada Research
www.kannadajournal.com

**ISSN: 2454–5813**
IJKR 2020; 6(3): 141-143
© 2020 IJKR
www.kannadajournal.com
Received: 08-06-2020
Accepted: 13-07-2020

**ಪ್ರತಿಮಾ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ, ಶಿಮೋಗ, ಕರ್ನಾಟಕ, ಭಾರತ

**Corresponding Author:**
**ಪ್ರತಿಮಾ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ, ಶಿಮೋಗ, ಕರ್ನಾಟಕ, ಭಾರತ

# ‘ಯಂತ್ರಗಳನ್ನು ಕಳಚೋಣ ಬನ್ನಿ’ ಮತ್ತು ಗಾಂಧೀಚಿಂತನೆಗಳ ಅನುಸಂಧಾನದ ಬಗೆಗಳು

**ಪ್ರತಿಮಾ**

**ಗಾಂಧೀಚಿಂತನೆಯತ್ತ ಹೊರಳುನೋಟ:–**

ಭಾರತದ ಬಹುತೇಕ ತಲ್ಲಣ–ತಾಕಲಾಟಗಳು ಎದುರಾದಾಗ ಅದಕ್ಕೆ ಪರ್ಯಾಯವಾಗಿ, ಪ್ರತಿಕ್ರಿಯೆಯಾಗಿ, ಪರಿಹಾರವಾಗಿ, ಸಾಧ್ಯತೆಯಾಗಿ ಮತ್ತೆ ಮತ್ತೆ ಗಾಂಧೀಚಿಂತನೆಗಳನ್ನು ಮುಖಾಮುಖಿ ಆಗಿಸುವ ಪರಂಪರೆಯೊಂದು, ಆಲೋಚನಾ ಕ್ರಮವೊಂದು ಎಂದಿಗೂ ಚಾಲ್ತಿಯಲ್ಲಿದೆ. ಆದರೆ ಅದರ ಅನುಸರಣೆ ಮತ್ತು ಅಳವಡಿಕೆ ಈಡೇರಿದ್ದು ಮಾತ್ರ ಬಹಳ ಕಡಿಮೆ. ಇದಕ್ಕೆ ಕಾರಣ ಗಾಂಧೀಚಿಂತನೆಯ ಮಿತಿಯೋ ಅಥವಾ ಜಾಗತೀಕರಣವನ್ನು ಒಪ್ಪಿಕೊಂಡಿರುವುದರ ಮನೋಭಾವವೋ ಇಲ್ಲವೇ ಪ್ರಾಯೋಗಿಕ ನೆಲೆಯಲ್ಲಿನ ತೊಡಕುಗಳೋ ಸ್ಪಷ್ಟತೆಯಿಲ್ಲ.

ಕೆಲವೊಮ್ಮೆ ಭಾರತದಾಚೆಗಿನ ಜಾಗತಿಕ ತಾಕಲಾಟಗಳಿಗೆ ಪ್ರತಿಕ್ರಿಯೆಯಾಗಿಯೂ ಗಾಂಧಿಯ ತತ್ವಾದರ್ಶಗಳು ಮುನ್ನೆಲೆಗೆ ಬಂದು ಒಂದಿಷ್ಟು ಚರ್ಚೆಗೆ ಸಾಮಗ್ರಿಯಾಗಿ ನಿಧಾನಕ್ಕೆ ಹಿನ್ನೆಲೆಗೆ ಸರಿಯುವುದೂ ಇದೆ. ಗಾಂಧಿ ಮತ್ತು ಗಾಂಧಿಯ ತತ್ವ ಪ್ರಣಾಳಿಕೆಗಳು ಒಂದು ಆದರ್ಶದ ನೆಲೆಯಲ್ಲಿಯೇ ವಿಹರಿಸಿವೆಯೇ ಹೊರತು; ಕಾರ್ಯತಃ ಸಂಚರಿಸಿದ್ದು ವಿರಳ. ಹೆಚ್ಚುತ್ತಿರುವ ನಗರೀಕರಣ, ಕೈಗಾರಿಕೀಕರಣ, ನಿಸರ್ಗವಿನಾಶ, ಕುಸಿಯುತ್ತಿರುವ ಆರೋಗ್ಯದ ಮಟ್ಟ, ನೈತಿಕ ಅಸ್ಥಿರತೆ, ಉಲ್ಬಣಿಸುತ್ತಿರುವ ಯುದ್ಧದಾಹ, ವಾಣಿಜ್ಯೀಕರಣದ ಪೈಪೋಟಿ, ವ್ಯಾಪಾರೀಕರಣಗೊಂಡ ಶಿಕ್ಷಣ, ಭ್ರಷ್ಟಾಚಾರಗೊಂಡ ರಾಜಕಾರಣ, ನಿರುದ್ಯೋಗ, ಭಯೋತ್ಪಾದನೆ, ಮರೀಚಿಕೆಯಾಗುತ್ತಿರುವ ಮಾನವೀಯತೆ, ಪ್ರಕೃತಿಯ ಮೇಲಣ ದೌರ್ಜನ್ಯ ಮುಂತಾದ ವರ್ತಮಾನದ ಅವಘಡಗಳಿಗೆ ಪ್ರತಿಕ್ರಿಯಿಸುವಾಗ ಗಾಂಧೀ ಮತ್ತು ಗಾಂಧಿಚಿಂತನೆಗಳು ಚರ್ಚೆಯ ಮುನ್ನೆಲೆಗೆ ಬರುತ್ತವೆ. ಗಾಂಧೀ ಪ್ರತಿಪಾದಿಸಿದ ಅಹಿಂಸೆ, ಸ್ವರಾಜ್ಯ, ಗ್ರಾಮಗಳ ಉದ್ಧಾರ, ಮೂಲಶಿಕ್ಷಣ, ನೈತಿಕ ಮೌಲ್ಯಗಳು; ಉಸಿರುಗಟ್ಟಿಸುವ ವರ್ತಮಾನದ ಜಾಗತಿಕ ಸಂಕಟಗಳಿಗೆ ಮದ್ದುಗಳಾಗಬಹುದೆಂಬ ಆಲೋಚನಾ ಕ್ರಮವೊಂದನ್ನು ಪ್ರಸನ್ನರ ‘ಯಂತ್ರಗಳನ್ನು ಕಳಚೋಣ ಬನ್ನಿ’ ಕೃತಿಯು ವಿಸ್ತರಿಸುತ್ತದೆ.

17–18ನೇ ಶತಮಾನದ ಆರಂಭದಲ್ಲಿ ಯಂತ್ರ ನಾಗರೀಕತೆ ಆಗಮಿಸಿದಾಗ ಮನುಕುಲ ಸಂಭ್ರಮದಿಂದ ಸ್ವಾಗತಿಸಿತ್ತು. ಇಂದು ಅದರ ವೃದ್ಧಾಪ್ಯದ ಕಾಲವನ್ನು ಎದುರಿಸುತ್ತಿದ್ದೇವೆ. ಚೈತನ್ಯಶೀಲತೆ ದೂರವಾಗಿ ವಿಚಾರವಾದಿಯಾಗಬೇಕಿದ್ದ ಮಾನವ, ಪರಮಲೋಭಿಯೂ, ಲಂಪಟನೂ, ಅತಿಯಾದ ಸುಖಪ್ರಿಯನೂ ಆಗುತ್ತಿದ್ದಾನೆ. ಹೀಗಿದ್ದೂ ನೆಮ್ಮದಿ ಕಾಣದೆ ನರಳುತ್ತಿದ್ದಾನೆ. ಯಂತ್ರಗಳನ್ನು ಕಳಚುವುದು ಹೇಗೆ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡ ಲೇಖಕರು, ವಾಸ್ತವಿಕ ನೆಲೆಯಲ್ಲಿ ಯಂತ್ರಾವಲಂಬನೆಯ ತೀವ್ರತೆಯನ್ನು ಮನಗಾಣುತ್ತಾ “ಮನುಷ್ಯನಂತೂ ಯಂತ್ರಗಳಿಲ್ಲದೆ ನಡೆಯಲಾರ, ಮಲಗಲಾರ, ಯೋಚಿಸಲಾರ, ರಂಜಿಸಲಾರ, ಪ್ರೀತಿಸಲಾರ, ಉಸಿರಾಡಲಾರ....... ಇಂದಿನ ಮಕ್ಕಳಿಗೆ ನದಿ, ತೊರೆ ಬೆಟ್ಟ, ಗುಡ್ಡ, ಕಾಡು–ಮೇಡುಗಳಷ್ಟೇ ಸಹಜವಾದುದು, ಯಂತ್ರಚಾಲಿತ ವಾಹನಗಳು, ಕಂಪ್ಯೂಟರ್‌ಗಳು, ಕಾಂಕ್ರೀಟು ಹಾಗೂ ಗಾಜಿನ ಮನೆಗಳು. ಯಂತ್ರಗಳನ್ನು ಕಳಚುವುದು ಸುಲಭದ ಮಾತಲ್ಲ.” (ಪು. ಸಂ. 28) ಎಂಬ ಸತ್ಯಕ್ಕೆ ಮುಖಮಾಡುತ್ತಲೇ ಯಂತ್ರದಿಂದ ಬಿಡುಗಡೆ ಹೊಂದಬಹುದಾದ ದಾರಿಗಳನ್ನು ಶೋಧಿಸಲಾಗಿದೆ. ಆ ದಾರಿಗಳೆಂದರೆ, 1. ಪೆಟ್ಟು ಕೊಟ್ಟು ಒತ್ತಾಯದಿಂದ ಯಂತ್ರಗಳನ್ನು ಕಳಚುವುದು ಖಂಡಿತಾ ಸಾಧ್ಯವಿಲ್ಲ; ಆದರೆ ಯಂತ್ರಗಳನ್ನು ಕಳಚುವುದು ಅಸಾಧ್ಯವೇನಲ್ಲ. ಇದು ಅರಿವು ಮತ್ತು ಮನಪರಿವರ್ತನೆಯಿಂದ ಸಾಧ್ಯವಾಗುವ ಸುದೀರ್ಘ ಚಳವಳಿ ಆಗಬೇಕು. 2. ಯಂತ್ರಗಳ ಬೇಡಿಕೆ ಕುಸಿಯುವಂತೆ ಮಾಡಿದಾಗ, ಒಂದು ದಿನ ಯಂತ್ರಗಳ ತಯಾರಿಕೆಯು ಸಂಪೂರ್ಣವಾಗಿ

ನಿಂತುಹೋಗುತ್ತದೆ. ಸಹಜ ಜೀವನಕ್ಕೆ ಅಡ್ಡಿ ಬಾರದ ಕೆಲವು ಸರಳ ಯಂತ್ರಗಳು ಪ್ರಾಯಶಃ ಉಳಿಯುತ್ತವೆ, ಉಳಿಯಲಿ. 3. ಗಾಂಧೀಜಿಯವರ ನೆನಪು ಮಾಡಿಕೊಳ್ಳುವ ಮೂಲಕ ಇಂತಹ ಒಂದು ತ್ಯಾಗ ಮತ್ತು ಸರಳ ಜೀವನಕ್ಕೆ ಅಡಿಯಿಡಬಹುದು.

ಇಂದು ಅತಿ ಹೆಚ್ಚು ಮಂದಿ ಬಳಕೆ ಮಾಡುತ್ತಿರುವ ರೈಲು ವ್ಯವಸ್ಥೆಯನ್ನು ಗಾಂಧೀಜಿ ಅಂದು ಟೀಕಿಸಿದ್ದರು. ರೈಲಿಗಿಂತಲೂ ವೇಗವಾದ ಮತ್ತು ಅಪಾಯಕಾರಿಯಾದ ವಾಹನ ಮತ್ತಿತರ ಯಂತ್ರಗಳು ಇಂದು ನಮ್ಮೊಂದಿಗಿವೆ. ವಿಚಿತ್ರವೆಂದರೆ, ಇವು ಮಾನವನಿಗೆ ಉಪಕಾರಿ ಎಂಬುದಕ್ಕಿಂತ ಅಪಾಯಗಳೇ ಹೆಚ್ಚು. ಆರಂಭದಲ್ಲಿ ರೈಲು ವ್ಯವಸ್ಥೆ ಬಂದಾಗ ರಾಜಕೀಯ ಕಾರಣವನ್ನೂ ಗಾಂಧೀಜಿ ಗುರುತಿಸುತ್ತಾರೆ. ಬ್ರಿಟಿಷರ ವಸಾಹತುಶಾಹಿ ವಿಸ್ತರಣೆಯೇ ಅವರಿಗೆ ಮುಖ್ಯವಾಗಿತ್ತು. ಈ ವಿಷಯ ಪ್ರಸ್ತಾಪಿಸುವ ಗಾಂಧೀಜಿಯವರು 'ಹಿಂದ್ ಸ್ವರಾಜ್' ಕೃತಿಯಲ್ಲಿ ಆಧುನಿಕ ಶಸ್ತ್ರಾಸ್ತ್ರಗಳನ್ನು ಕುರಿತು ಆಡಿರುವ ಮಾತುಗಳು ಇಂದು ನಿಜಕ್ಕೂ ಪ್ರಸ್ತುತ; "ಪರಸ್ಪರ ದೈಹಿಕವಾಗಿ ಬಡಿದಾಡಿದರೆ ಶಕ್ತಿಪ್ರದರ್ಶನವಾದರೂ ಆದೀತು. ಆದರೆ ಈಗಿನ ಯುದ್ಧಗಳು ಅದೂ ಅಲ್ಲ. ಎಲ್ಲೋ ಗುಂಡಿಯೊತ್ತಿ, ಇನ್ನೆಲ್ಲೋ ಲಕ್ಷಾಂತರ ಮಂದಿಯನ್ನು ಕೊಲ್ಲುವುದರಲ್ಲಿ ಶೌರ್ಯವೆಲ್ಲಿಂದ ಬಂತು" ಎಂದು ಪ್ರಶ್ನಿಸುತ್ತಾರೆ ಗಾಂಧೀಜಿ. ಗಾಂಧೀಜಿಯವರ ಕಾಲದಲ್ಲಿ ಭಯೋತ್ಪಾದಕತೆಯೆಂಬುದಿರಲಿಲ್ಲ. ಜನದಟ್ಟಣೆಯ ಜಾಗದಲ್ಲಿ ಬಾಂಬೊಂದನ್ನು ಇರಿಸಿ, ಅಮಾಯಕರಾದ ಸಾವಿರಾರು ಮಂದಿಯನ್ನು ಸಾಯಿಸಿ ಹೆಮ್ಮೆಪಟ್ಟುಕೊಳ್ಳುವ ಹೋರಾಟ ತಂತ್ರವು ಆಗಿನ್ನೂ ಬೆಳಕಿಗೆ ಬಂದಿರಲಿಲ್ಲ! (ಪು. ಸಂ. 69) ಆಧುನಿಕ ಯಂತ್ರಗಳು ಗಾಂಧೀಚಿಂತನೆಗಳನ್ನು ಮೀರಿ ಬೆಳೆದಿರುದನ್ನು ಲೇಖಕರು ಚರ್ಚಿಸುತ್ತಾರೆ.

ಪುಸ್ತಕದ ಆರಂಭದಲ್ಲಿ ಜಂಗಮ–ಸ್ಥಾವರಗಳ ಅಂತರ್‌ಸಂಬಂಧವನ್ನು ಚರ್ಚೆ ಮಾಡಲಾಗಿದೆ. ಇದು ಗಾಂಧೀಜಿಯವರು ಮಂಡಿಸಿದ ತತ್ವವೇ ಆಗಿದೆ. ಇದನ್ನು ಕೃತಿಯೊಳಗೆ ಲೇಖಕರು ಸ್ಪಷ್ಟಪಡಿಸುವುದು ಹೀಗೆ; 'ಯಂತ್ರ ಬೇಕೇ ಬೇಡವೇ ಎಂಬ ಪ್ರಶ್ನೆಯನ್ನು, ದೇಹ ಬೇಕೇ ಬೇಡವೇ ಎಂಬ ಪ್ರಶ್ನೆಯೊಂದಿಗೆ ಸಮೀಕರಿಸಿ ನೋಡಿ ಚರ್ಚಿಸುವ ಗಾಂಧೀಜಿಯವರ ರೀತಿ ಅಸಾಧಾರಣವಾದುದು. ಹೀಗೆ ಮಾಡುವುದರ ಮೂಲಕ ಅವರು, ದೇಹಕ್ಕೂ–ಜೀವಕ್ಕೂ ಯಂತ್ರಕ್ಕೂ–ಮನುಷ್ಯನಿಗೂ ನಡುವೆ ಇರಬೇಕಾದ ಆರೋಗ್ಯಕರ ಸಂಬಂಧವನ್ನು ಸೂಚಿಸುತ್ತಾರೆ, ಸಮತೋಲನವನ್ನು ಸೂಚಿಸುತ್ತಾರೆ.' (ಪು.ಸಂ.115) ಈ ಮೂಲಕ ಮನುಷ್ಯ ಮುಖ್ಯವಾಗಬೇಕೇ ಹೊರತು, ಯಂತ್ರಗಳಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

'ಖಾದಿ' ಎಂಬ ಹೆಸರಿಟ್ಟವರು ಗಾಂಧೀಜಿ. ನಶಿಸಿಹೋದ ಪಾರಂಪರಿಕ ಬಟ್ಟೆ ತಯಾರಿಕೆ ವಿಧಾನವನ್ನು ಪುನರುಜ್ಜೀವನಗೊಳಿಸಬೇಕೆಂದು ಹೊರಟಿದ್ದರು. ಪ್ರಸ್ತುತ ಕೃತಿಯಲ್ಲಿ ಕೈಮಗ್ಗ, ನೈಸರ್ಗಿಕ ಬಣ್ಣಗಾರಿಕೆ, ಕೃಷಿಗೆ ಪೂರಕವಾಗಿ ನಿಲ್ಲುವ ಕೈಮಗ್ಗಗಳು ಮುಂತಾದ ವಿಚಾರಗಳನ್ನು ಉದ್ದೇಶಪೂರ್ವಕವಾಗಿ ಚರ್ಚಿಸಲಾಗಿದೆ. ಚರಕ ಕಾರ್ಯಕ್ರಮದ ಬಗೆಗೆ ಗಾಂಧೀಜಿಯವರಿಗೆ ಎಂತಹ ವಿಶ್ವಾಸವಿತ್ತೆಂದರೆ, ಜನ ಕಡೆಯವರೆಗೂ ನನ್ನನ್ನು ಯಾವುದಕ್ಕಾಗಿ ನೆನಪಿಡುತ್ತಾರೆಂದರೆ, ಚರಕವನ್ನು ಸೂಚಿಸಿದ್ದಕ್ಕಾಗಿ ಎಂಬ ಮಾತನ್ನು ಆಡುತ್ತಾರೆ.

**ಯಂತ್ರಸಂಸ್ಕೃತಿ ಮತ್ತು ಶ್ರಮಸಂಸ್ಕೃತಿಯ ಮುಖಾಮುಖಿ:–**

ದೈತ್ಯ ಯಂತ್ರಸಂಸ್ಕೃತಿಯೆಂಬ ಬಿರುಗಾಳಿಯೆದುರು ಶ್ರಮಸಂಸ್ಕೃತಿ ಎಂಬ ಕಿರುಸೊಡರನ್ನು ಮುಂದೊಡ್ಡಿ ಲೇಖಕರು ಯಂತ್ರವಿಮೋಚನೆಯ ಸಾಧ್ಯತೆಗಳನ್ನು ಪ್ರತಿಪಾದಿಸುತ್ತಾರೆ. ಇದಕ್ಕಾಗಿ ಯಂತ್ರಗಳನ್ನು ಕಳಚೋಣ ಬನ್ನಿ ಎಂಬ ದೀಕ್ಷಾಬದ್ಧವಾದ ಕರೆಯೊಂದನ್ನು ಆಧುನಿಕ ಸಮಾಜಕ್ಕೆ ನೀಡಿದ್ದಾರೆ. ಈ ದೀಕ್ಷಾಬದ್ಧ ಪ್ರಣಾಳಿಕೆಗಳಿಗೆ ಗಾಂಧಿಯ ತತ್ವಾದರ್ಶಗಳನ್ನು ಬಲವಾದ ಆಕರವಾಗಿಟ್ಟುಕೊಂಡು ಪ್ರತಿಪಾದನೆಗೆ ತೊಡಗಿದ್ದಾರೆ. ಕುಲಕಸುಬು, ಕಾಯಕತತ್ವ, ಗುಡಿಕೈಗಾರಿಕೆ, ಮಾಲಿನ್ಯರಹಿತ ಉತ್ಪಾದನೆಗೆ ಮಹತ್ವ ನೀಡುತ್ತಾರೆ.

'ಹಿಂದ್ ಸ್ವರಾಜ್' ಪುಸ್ತಕದಲ್ಲಿ 'ಸಮಾಜ' 'ಸಂಸ್ಕೃತಿ' ಹಾಗೂ 'ದುಡಿಮೆ' ಈ ಮೂರೂ ಸಂಗತಿಗಳನ್ನು ಸಂಕಷ್ಟಕ್ಕೆ ತಳ್ಳುವ ಯಂತ್ರಗಳನ್ನು ತಿರಸ್ಕರಿಸುವುದನ್ನು ಇಲ್ಲಿ ಜ್ಞಾಪಿಸಲೇಬೇಕು. ನಾವು ಮತ್ತೊಮ್ಮೆ ಅನಿವಾರ್ಯವಾಗಿ ಮೂಲ ಪ್ರಶ್ನೆಗಳಿಗೆ ಹಿಂದಿರುಗಬೇಕಾಗಿ ಬಂದಿದೆ. ಯಂತ್ರಗಳ ಎದುರು ಶ್ರಮಸಂಸ್ಕೃತಿ ಮಂಡಿಯೂರಿ ಸೋಲೊಪ್ಪಿಕೊಳ್ಳುತ್ತಿದೆಯೇ ಅಥವಾ ನಾವು ಒಪ್ಪಿಸುತ್ತಿದ್ದೇವೆಯೇ? ಗಾಂಧೀಜಿಯವರು ಕಂಡ ಗ್ರಾಮಸ್ವರಾಜ್ಯದ ಕಲ್ಪನೆ ಇಂದು ತಿರುವುಮುರುವಾಗಿದೆ. ಹಳ್ಳಿಗಳ ಸ್ವಾವಲಂಬನೆ ಎಂಬುದು ಬೇರೆಯದೇ ಅರ್ಥವನ್ನು ಪಡೆದುಕೊಳ್ಳುತ್ತಿದೆ. ಗ್ರಾಮಗಳನ್ನೇ ನಗರಗಳನ್ನಾಗಿ ಮಾಡಿಬಿಟ್ಟರೆ, ಆಧುನಿಕ ಯಂತ್ರಗಳನ್ನು ಪೂರೈಸಿದರೆ, ಗ್ರಾಮಗಳ ಅಭಿವೃದ್ಧಿಯಾಗಿದೆ ಎಂಬ ನಿಲುವು ಇಂದು ಕಂಡುಬರುತ್ತಿದೆ. ಶ್ರಮಸಂಸ್ಕೃತಿಯ ಮಾನವ ಸಿಗದಾಗಿದ್ದಾನೆ. ಶ್ರಮಸಂಸ್ಕೃತಿಯೆಡೆಗೆ ಮತ್ತೊಮ್ಮೆ ಕಣ್ಣು ಹೊರಳಿಸುವುದು ಪಾಪ ಎಂಬ ಭಾವ ಮೂಡುತ್ತಿದೆ. ಹಸಿರುಕ್ರಾಂತಿಯ ಹೆಸರಿನೊಂದಿಗೆ ನಮ್ಮ ಗ್ರಾಮಗಳನ್ನು ಅನಾಯಾಸವಾಗಿ ಆವರಿಸಿದ್ದು ಇದೇ ಯಂತ್ರನಾಗರೀಕತೆ. ಕೃಷಿ ಒಂದು ಸಂಸ್ಕೃತಿಯಾಗಿ ಉಳಿಯದೆ, ಲಾಭದಾಯಕ ಉದ್ದಿಮೆಯಾಗಿ ರೂಪುಗೊಂಡಿದೆ. ದುರಂತವೆಂದರೆ, ಕೃಷಿಯನ್ನು ಅತಿಯಾಗಿ ಲಾಭದಾಯಕವಾಗಿಸುವ ನಿಟ್ಟಿನಲ್ಲಿ ಕೃಷಿಕ ಮತ್ತು ಕೃಷಿಭೂಮಿ ಇಬ್ಬರೂ ಸತ್ವಹೀನರಾಗುತ್ತಿದ್ದಾರೆ. ಆದರೆ ಲಾಭದಾಯಕವಲ್ಲದ ಯಾವುದೂ ಇಂದಿನ ಯಂತ್ರನಾಗರೀಕತೆಯ ಯುಗದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲಾರದು.

ಕೃಷಿಗೆ ಪೂರಕವಾದ ಹಲವು ಪೂರಕ ಉದ್ದಿಮೆಗಳು ಮತ್ತು ಉದ್ದಿಮೆದಾರರು ಶ್ರಮಸಂಸ್ಕೃತಿಗೆ ಬೆನ್ನುಮಾಡಿ ಬಹಳ ಸಮಯ ಸಂದಿದೆ. ಬಡಗಿ, ನೇಕಾರ, ಚಮ್ಮಾರ, ಕುಂಬಾರ, ಸಿಂಪಿಗ........ ಹೀಗೆ ನೂರಾರು ದುಡಿಯುವ ವರ್ಗಗಳು ಇಂದು ಯಂತ್ರನಾಗರೀಕತೆಯ ಅಡಿಯಾಳಾಗಿ ಹೋಗಿದ್ದಾರೆ. ಸೃಜನಶೀಲವಾದ ಮತ್ತು ಬಾಂಧವ್ಯವನ್ನು ಕಟ್ಟಿಡುತ್ತಿದ್ದ ಶ್ರಮಸಂಸ್ಕೃತಿಯ ಹಲವು ವರ್ಗಗಳು ಇಂದು ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಯಂತ್ರಸಂಸ್ಕೃತಿಯ ಮೊರೆಹೋಗುತ್ತಿದ್ದಾರೆ. ಇದು ಅನಿವಾರ್ಯ ಕೂಡಾ. ಆದರೆ ಮಾನವನನ್ನು ಮೀರಿ ಬೆಳೆದು ನಿಲ್ಲುತ್ತಿರುವ ಯಂತ್ರಗಳಿಗೆ ಕಡಿವಾಣ ಹಾಕದಿದ್ದಲ್ಲಿ ಮಾನವನ ಅಸ್ತಿತ್ವಕ್ಕೆ ಅರ್ಥವೇ ಇರಲಾರದು. ಕಾಯಕ ತತ್ವವನ್ನು ಹಿಂದಿನಿಂದ ಸಾರುತ್ತಾ, ಆರಾಧಿಸುತ್ತಾ, ಅನುಸರಿಸುತ್ತಾ ಬಂದಿರುವ ಭಾರತೀಯರು ಯಂತ್ರಗಳ ಗುಲಾಮರಾಗುವುದು ದುರಂತವೇ ಸರಿ.

**ಸಾಧ್ಯತೆ ಮತ್ತು ಸವಾಲುಗಳು:–**

ಯಂತ್ರಗಳನ್ನು ಕಳಚುವ ಸಾಧ್ಯತೆ ಎಷ್ಟು? ಸವಾಲುಗಳೇನು? ಎಂಬ ಬಗ್ಗೆ ಅವಲೋಕಿಸಿದಾಗ; ಇಪ್ಪತ್ತೊಂದನೇ ಶತಮಾನದಲ್ಲಿ ನಿಂತಿರುವ ನಾವು ಈಗಾಗಲೇ ಯಂತ್ರಗಳ ದಾಸರಾಗಿ ಶತಮಾನವೇ ಕಳೆದಿದೆ. ಈಗಾಗಲೇ ಭಾರತದ ವ್ಯವಹಾರ ನೀತಿ ವಿಶ್ವ ವ್ಯವಹಾರದೊಂದಿದೆ ಜೋಡಣೆಯಾಗಿದೆ. ಜಾಗತೀಕರಣಕ್ಕೆ ತೆರೆದುಕೊಂಡಿರುವ ಇಡೀ ಭಾರತೀಯರ ಬದುಕು ಮತ್ತು ಜೀವನಶೈಲಿ, ಮನೋಭಾವ ಮತ್ತು ಮುನ್ನೋಟಗಳೆಲ್ಲವೂ

ಜಾಗತೀಕರಣದ ಮಾದರಿಗೆ ಸಿದ್ಧವಾಗಿದೆ. ಜಗ್ಗಾಡುತ್ತಲೇ, ತಿಣುಕುತ್ತಲೇ ಜಾಗತೀಕರಣ ರೂಪಿಸಿದ ಜಾಲದಲ್ಲಿ ಅದರ ಸ್ವರೂಪಕ್ಕೆ ತನ್ನನ್ನು ಬಗ್ಗಿಸಿಕೊಂಡಿದೆ ಮತ್ತು ಒಗ್ಗಿಸಿಬಿಟ್ಟಿದೆ. ಗಾಂಧಿಚಿಂತನೆ ಎನ್ನುವುದು ಈ ಹೊತ್ತಿನಲ್ಲಿ ಬಲಾತ್ಕಾರದ ಮಾಗಿಸ್ನಾನದಂತೆಯೇ ಸರಿ. ಒಂದು ಬಗೆಯ ಹಿಮ್ಮರಳುವಿಕೆಯಾಗುತ್ತದೆ. ಈ ಹಿಮ್ಮರಳುವಿಕೆ ಅಷ್ಟು ಸಲೀಸಾದುದೇ? ಇಡಿ ಜೀವನ ಸ್ವರೂಪವೇ ಬದಲಾಗಬೇಕಾದುದು ಅಗತ್ಯ. ಇದು ಸಾಧ್ಯವಾದುದೇ ಹೌದಾದಲ್ಲಿ ಭಾರತೀಯರು ಮಾತ್ರ ಬದಲಾವಣೆ ಆದಂತೆ. ಜಗತ್ತಿನ ಕೊಂಡಿಯನ್ನೇ ಕಳಚಿಕೊಂಡು ದ್ವೀಪದಂತೆ ಬದುಕುವುದು ಭಾರತಕ್ಕೆ ಈ ಹೊತ್ತಿನಲ್ಲಿ ಸಹ್ಯವಾಗದು. ಯಂತ್ರನಾಗರೀಕತೆ ಬಿಸಿತುಪ್ಪದಂತೆ. ಇಟ್ಟು ಅನುಭವಿಸಲಾರದ, ಬಿಟ್ಟು ಸಹಿಸಲಾರದ ಸ್ಥಿತಿಯಲ್ಲಿದ್ದೇವೆ. ನಿತ್ಯಬದುಕಿನಲ್ಲಿ ಹಾಸುಹೊಕ್ಕಾಗಿರುವ, ಮನಸು–ಮನೆ–ಕಚೇರಿಗಳನ್ನು ತುಂಬಿಹೋಗಿರುವ ಯಂತ್ರಗಳನ್ನು ಕಳಚಿ ಬಿಡುಗಡೆ ಹೊಂದುವುದು ಸಾಧ್ಯವೇ ಇಲ್ಲ ಎಂಬ ಸ್ಥಿತಿಗೆ ನಾವು ತಲುಪಿದ್ದೇವೆ. ಹಾಗಾಗಿ ಗಾಂಧೀಜಿ ಮತ್ತು ಪ್ರಸನ್ನರ ಚಿಂತನೆಗಳೆರಡರ ಆಶಯವು ಉತ್ಕೃಷ್ಟವಾಗಿದ್ದರೂ ಪ್ರಾಯೋಗಿಕ ನೆಲೆಯಲ್ಲಿ ಆದರ್ಶ ಗೋಪುರಗಳಾಗೇ ಉಳಿದುಬಿಡುತ್ತವೆ. ಈ ಕೃತಿಯ ಪ್ರತಿಪಾದನೆ ಮತ್ತು ಅನುಷ್ಠಾನಗಳೆರಡರ ನಡುವೆ ಅಗಾಧ ಕಂಧಕವಿದೆ. ಹೊಸಬದುಕಿನ ಕ್ರಮಕ್ಕೆ ಮುಂದುವರಿಯುವುದಕ್ಕಿಂತ ಹಿಮ್ಮರಳುವುದು ಕಠಿಣ.

ಪರಂಪರೆ ಮತ್ತು ಆಧುನಿಕತೆಗಳ ನಡುವೆ ಕಳೆದ ಶತಮಾನದ ತಲೆಮಾರುಗಳ ಸಂಘರ್ಷಕ್ಕಿಂತಲೂ ಈ ಆದರ್ಶದ ಹಾದಿ ಕಠಿಣ ಮತ್ತು ಸಂಕೀರ್ಣವಾದುದು. ಭೋಗಸಂಸ್ಕೃತಿಯ ವಿಲಾಸೀ ಬದುಕಿನ ಕ್ರಮವನ್ನು ಹೊದ್ದುಕೊಂಡ ಭಾರತೀಯ ಮನಸ್ಸುಗಳು ತ್ಯಾಗಸಂಸ್ಕೃತಿಯ ಸರಳ ಬದುಕಿನ ಶ್ರಮಸಂಸ್ಕೃತಿಗೆ ಪುನರ್ ಒಗ್ಗಿಕೊಳ್ಳುವುದು ಕಠಿಣ. ಯಂತ್ರಗಳೆಂದರೆ, ಮನುಷ್ಯನಿಗೆ ಸಹಾಯಕವಾಗಿ ನಿಲ್ಲಬಲ್ಲ ಯಾಂತ್ರಿಕ ಸಾಧನಗಳು ಎಂದು ಪದಕೋಶ ಹೇಳುತ್ತದೆ. ಈ ಅರ್ಥದಲ್ಲಿ 'ಹಲ್ಲಿನ ಕಸ ತೆಗೆಯಲೆಂದು ಬಳಸುವ ಯಕಶ್ಚಿತ್ ಹುಲ್ಲುಕಡ್ಡಿ ಸಹ ಯಂತ್ರವೆ' ಎಂದು ಗಾಂಧೀಜಿಯವರು ಹೇಳುತ್ತಾರೆ. 'ಹಿಂದ್ ಸ್ವರಾಜ್' ಕೃತಿಯ ಮುಂದುವರಿದ ಭಾಗ ಈ ಕೃತಿಯಾಗಿರುವಂತೆ ಕಂಡುಬರುವುದರೊಂದಿಗೆ; 1907ರಿಂದ 1947ರವರೆಗೆ ನಡೆದ ಚರ್ಚೆಯ ಮುಂದುವರಿದ ಭಾಗವಾಗಿ ಇಂದಿನ ಈ ಚರ್ಚೆಯನ್ನು ಪರಿಗಣಿಸಬಹುದಾಗಿದೆ. ಗಾಂಧೀಜಿಯವರು ಬಳಸುತ್ತಿದ್ದ 'ಚರಕ' ಕೂಡಾ ಒಂದು ಯಂತ್ರವೇ ಎಂಬ ಟೀಕೆಯನ್ನು ಅಂದು ಎದುರಿಸಬೇಕಾಯಿತು. ಚರಕದ ಮಹತ್ವ ಮತ್ತು ಅಗತ್ಯತೆಯೇ ಬೇರೆ, ಐಷಾರಾಮಿ ಯಂತ್ರಗಳೇ ಬೇರೆ ಎಂಬುದನ್ನು; 'ನಾವು ಕಳಚಬೇಕಾದುದು ಕೈಗಳನ್ನಲ್ಲ, ಯಂತ್ರಗಳನ್ನು' ಎಂದು ಹೇಳುವಲ್ಲಿ ಸ್ಪಷ್ಟಪಡಿಸಲಾಗಿದೆ.

ಪೂರ್ಣ ಪ್ರಮಾಣದಲ್ಲಿ ಯಂತ್ರಗಳನ್ನು ಕಳಚುವುದು ಅಸಾಧ್ಯವೇ ಸರಿ. ಆಘಾತಕಾರಿಯೂ ಹೌದು. ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ, ನಿಧಾನವಾಗಿ ಯಂತ್ರಗಳ ದಾಸರಾಗುವುದನ್ನು ತಪ್ಪಿಸಿಕೊಳ್ಳಬೇಕಿದೆ. ಈ ಸಮಯದಲ್ಲಿ ಕೊಂಚ ಎಚ್ಚರಿಕೆ ವಹಿಸಿ ಮನುಕುಲಕ್ಕೆ ಕಡಿಮೆ ಆಘಾತವಾಗುವಂತೆ ನೋಡಿಕೊಳ್ಳಬೇಕಿದೆ. ನಾಲ್ಕು ದಶಕಗಳು ನಮ್ಮನ್ನಾಳಿದ ಯುರೋಪ್ ಖಂಡವು, ಭಾರತೀಯರನ್ನು ಗುಲಾಮರನ್ನಾಗಿಸಿಕೊಂಡಿದ್ದು ಎಷ್ಟು ಸತ್ಯವೋ, ಅಷ್ಟೇ ಸತ್ಯ ಇಂದು ಯುರೋಪ್ ಯಂತ್ರಗಳ ಗುಲಾಮನಾಗಿರುವುದು. ಶ್ರಮಸಂಸ್ಕೃತಿಯ ಪರಂಪರೆಯಿಂದ ಬಂದ ಭಾರತೀಯರಿಗೆ ಯಂತ್ರಗಳನ್ನು ಕಳಚುವುದು ಅಸಾಧ್ಯವೇನಲ್ಲ; ಆದರೆ ಯುರೋಪಿಗರಿಗೆ ಇದು ಅಸಾಧ್ಯ. ಈ ನಿಟ್ಟಿನಲ್ಲಿ ಭಾರತದ ಪಾತ್ರ ಪ್ರಪಂಚ ಮಟ್ಟದಲ್ಲಿ ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲಬಲ್ಲದು. ಯುರೋಪಿಯನ್ ರಾಷ್ಟ್ರಗಳಲ್ಲಿ ಉತ್ಪಾದನಾ ಪದ್ಧತಿಗಳು ಹೆಚ್ಚೂಕಡಿಮೆ ನಾಶವಾಗಿ ಹೋಗಿವೆ. ಯಂತ್ರಗಳನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲ ಎಂಬಂತಾಗಿದೆ. ಆದರೆ, ಭಾರತೀಯರು ಅದರಾಚೆಗೂ ಸಾಧ್ಯತೆಗಳಿವೆ ಎಂಬುದನ್ನು ತೋರಿಸಬಲ್ಲವರು. ಸತ್ಯ ಅಹಿಂಸೆಗಳ ಪಾಠವನ್ನು ಜಗತ್ತಿನಾದ್ಯಂತ ಬೋಧಿಸಿದ ಗಾಂಧೀಜಿಯವರ ನಡೆನುಡಿಗಳು ಯಂತ್ರಗಳ ಕಳಚುವಿಕೆಯಲ್ಲೂ ಮುಂಚೂಣಿಯಲ್ಲಿ ನಿಲ್ಲುತ್ತವೆ.

ಯಂತ್ರ ನಾಗರೀಕತೆ ಸೃಷ್ಟಿಸಿದ ಸಮಸ್ಯೆಗಳು ಒಂದೆರಡಲ್ಲ. ಮನುಷ್ಯ ಮನುಷ್ಯನಾಗುವುದನ್ನೇ ಮರೆತುಬಿಟ್ಟಿದ್ದಾನೆ. ಹಾಗೆ ನೋಡಿದರೆ ಸಮಸ್ಯೆ ಮನುಷ್ಯತ್ವದ್ದಲ್ಲವೇ ಅಲ್ಲ; ಮಹತ್ವಾಕಾಂಕ್ಷೆಯದ್ದು. ಯಂತ್ರನಾಗರೀಕತೆ ಬಂದಾಗಿನಿಂದ ಮನುಷ್ಯನ ಮಹತ್ವಾಕಾಂಕ್ಷೆ ಮಿತಿಮೀರಿ ಬೆಳೆದಿದೆ. ಮಹತ್ವಾಕಾಂಕ್ಷೆ ಮತ್ತು ಮನುಷ್ಯತ್ವ ಎಣ್ಣೆ ಸೀಗೆಕಾಯಿಗಳಂತೆ, ವಿರೋಧಿ ತತ್ವಗಳು. ಮನುಷ್ಯನಿಗಂಟಿದ ಹಲವು ವ್ಯಸನಗಳನ್ನು ಯಂತ್ರನಾಗರೀಕತೆಯು ವೈಭವೀಕರಿಸಿ ನೋಡುತ್ತದೆಂಬುದನ್ನು ಕೃತಿ ತೋರಿಸುತ್ತಿದೆ.

**ಪರಾಮರ್ಶನ ಗ್ರಂಥಗಳು:–**

1. ಪ್ರಸನ್ನ, ಯಂತ್ರಗಳನ್ನು ಕಳಚೋಣ ಬನ್ನಿ, ಒಂಟಿದನಿ ಪ್ರಕಾಶನ, ಕವಿಕಾವ್ಯ ಟ್ರಸ್ಟ್, ಹೆಗ್ಗೋಡು, 2009.
2. ಮಹಾತ್ಮಾ ಗಾಂಧಿ ಕೃತಿ ಸಂಚಯ, ಭಾರತೀಯ ವಿದ್ಯಾ ಭವನ, ಬೆಂಗಳೂರು ಪ್ರೆಸ್, 2009.
3. ಪ್ರೊ. ಕೆ. ಭೈರಪ್ಪ, ಸಮಗ್ರ ಸಾಮಾಜಿಕ ಚಿಂತನೆ, ಸಪ್ನ ಬುಕ್ ಹೌಸ್, 2009.